STARRED QUESTIONS

(to which oral answers were given)

Sugar Factory at Holenarasipur

277. Sri H. D. DEVE GOWDA (Holenarasipur).—

Will the Minister for Industries, Information and Publicity be pleased to state :—

(*a*) whether any representation has been received by the State Government requesting sanction of a sugar factory at Holenarasipur Taluk under Co-operative Sector in the IV Five Year Plan ;

(*b*) whether Government intends to take necessary steps to sanction the same in IV Five Year Plan ?

Sri M. RAJASEKHARA MURTHY (Minister for Industries, Information and Publicity).—

(*a*) No.

(*b*) Does not arise.

ಶ್ರೀ ಹೆಚ್. ಡಿ. ದೇವೇಗೌಡ.—ಕೋ-ಆಪರೇಟಿವ್ ಸೆಕ್ಟಾರಿನಲ್ಲಿ ಹೊಳೆನರಸೀಪುರದಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಮಂಜೂರು ಮಾಡಬೇಕೆಂದು ಸರಕಾರಕ್ಕೆ ಏನಾದರೂ ಮನವಿ ಗಳು ಬಂದಿವೆಯೇ ? ಬಂದಿದ್ದರೆ ಅದರ ಬಗ್ಗೆ ಸರಕಾರ ಏನು ಕಾರ್ಯಕ್ರಮ ತೆಗೆದುಕೊಂಡಿದೆ ?

† ಶ್ರೀ ಎಂ. ರಾಜಶೇಖರಮೂರ್ತಿ.—ಸಕ್ಕರೆ ಕಾರ್ಖಾನೆ ಇಂತಹ ಸ್ಥಳದಲ್ಲಿ ಬೇಕು ಎಂದು ಅದಕ್ಕೆ ನಿಯಮಿತವಾದ ಗೊತ್ತಾದ ಫಾರಂನಲ್ಲಿ ಸರಕಾರಕ್ಕೆ ಕಳುಹಿಸಿದರೆ ಅದರ ಬಗ್ಗೆ ಶಿಫಾರಸು ಮಾಡಿ ಕೇಂದ್ರ ಸರಕಾರಕ್ಕೆ ಕಳುಹಿಸಬಹುದು.

ಶ್ರೀ ಎಸ್. ಎಂ. ಗುರೆಡ್ಡಿ.—ಕೇಂದ್ರ ಸರಕಾರದವರು ನಾಲ್ಕನೆ ಯೋಜನೆಯಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ ?

ಶ್ರೀ ಎಂ. ರಾಜಶೇಖರ ಮೂರ್ತಿ.—ಈ ಪ್ರಶ್ನೆ ಇದರಲ್ಲಿ ಉದ್ಭವಿಸುವುದಿಲ್ಲ.

ಶ್ರೀ ಬಿ. ದೊಡ್ಡ ಬೋರೇಗೌಡ.—ಇದುವರೆಗೆ ಕೇಂದ್ರ ಸರಕಾರದವರು ರಾಜ್ಯ ಸರಕಾರದಲ್ಲಿ ಎಷ್ಟು ಸಕ್ಕರೆ ಕಾರ್ಖಾನೆಗಳಿಗೆ ಲೈಸೆನ್ಸ್ ಕೊಟ್ಟಿದ್ದಾರೆ ?

ಶ್ರೀ ಎಂ. ರಾಜಶೇಖರಮೂರ್ತಿ.—ಇದರ ಬಗ್ಗೆ ಬೇರೆ ಪ್ರಶ್ನೆ ಕೇಳಿದರೆ ಹೇಳಬಹುದು. ಇದು ಹೊಳೆನರಸೀಪುರಕ್ಕೆ ಸಂಬಂಧಪಟ್ಟುದು.

ಶ್ರೀ ಎಂ. ಕೆ. ಬೊಮ್ಮೇಗೌಡ.—ಸರಿಯಾದ ನಿಗದಿಯಾಗಿ ಗೊತ್ತಾಗಿರುವ ಫಾರಂನಲ್ಲಿ ಅರ್ಜಿ ಬಂದರೆ ಕಳುಹಿಸುತ್ತೇವೆ ಎಂದು ಮಂತ್ರಿಗಳು ಹೇಳಿದರು. ಆದರೆ ಎಲ್ಲೆಲ್ಲಿ ಸಕ್ಕರೆ ಕಾರ್ಖಾನೆ ಅವಶ್ಯಕವಿದೆ ಅ ನ್ನು ತಿಳಿದುಕೊಂಡು ಕೇಂದ್ರಕ್ಕೆ ರೆಕಮೆಂಡೇಷನ್ ಏಕೆ ಮಾಡಬಾರದು ?

ಶ್ರೀ ಎಂ. ರಾಜಶೇಖರಮೂರ್ತಿ.—ಕೇಂದ್ರ ಸರಕಾರದವರೇ ಸಕ್ಕರೆ ಕಾರ್ಖಾನೆಗೆ ಲೈಸನ್ಸ್ ಕೊಡುವವರು. ನಮ್ಮ ಕೆಲಸ ಏನಿದ್ದರೂ ಅರ್ಜಿ ಬಂದ ಮೇಲೆ ಶಿಫಾರಸು ಕಳುಹಿಸುವುದು. ಅರ್ಜಿ ಬಂದಾಗ ಅದರ ವಿವರಗಳನ್ನೆಲ್ಲಾ ಪರಿಶೀಲಿಸಿ ಆ ನಂತರ ಶಿಫಾರಸನ್ನು ಕಳುಹಿಸ ಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಹೇಮಾವತಿ ನದಿಯ ದಂಡೆಯಲ್ಲಿ ಸುಮಾರು 35 ಸಾವಿರ ಎಕರೆಗಳಷ್ಟು ಭೂಮಿ ನೀರಾವರಿಯಾಗುತ್ತಿದೆ. ಇದರಲ್ಲಿ ಸುಮಾರು 15 ಸಾವಿರ ಎಕರೆಗಳಲ್ಲಿ ಕಬ್ಬು ಬೆಳೆಯಲು ಅನುಕೂಲ ಇದೆ. ಇದನ್ನು ನಾಲ್ಕನೇ ಯೋಜನೆಯಲ್ಲಿ ಮಾಡ ಬೇಕೆಂದು ಇತ್ತು. ಇದರ ಬಗ್ಗೆ ಪರಿಶೀಲನೆ ಮಾಡಿ ಕೇಂದ್ರದವರಿಗೆ ಶಿಫಾರಸು ಮಾಡುತ್ತೀರಾ ?

ಶ್ರೀ ಎಂ. ರಾಜಶೇಖರಮೂರ್ತಿ.—ಅರ್ಜಿ ಬಂದ ಮೇಲೆ ಇವನ್ನೆಲ್ಲಾ ಪರಿಶೀಲಿಸಿ ಶಿಫಾರಸನ್ನು ಕಳುಹಿಸಬಹುದು.